# ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976

(ಕರ್ನಾಟಕ ರಾಜ್ಯಪತ್ರ, ಗುರುವಾರ, ಮಾರ್ಚ್ 6, 2008, ಭಾಗ – IVಎ, 246 ರಿಂದ 256ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ– I
### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ – II
### ವಿವಾಹಗಳ ನೋಂದಣಿ

3. ಪ್ರತಿಯೊಂದು ವಿವಾಹವನ್ನು ನೋಂದಣಿ ಮಾಡಿಸತಕ್ಕದ್ದು
4. ವಿವಾಹಗಳ ರಿಜಿಸ್ಟ್ರಾರನ ನೇಮಕ, ಮೊದಲಾದವು
5. ವಿವಾಹಗಳ ವಿವರಣಾ ಪತ್ರ
6. ಮೂವತ್ತು ದಿನಗಳ ತರುವಾಯ ಸಲ್ಲಿಸಬಹುದಾದ ವಿವಾಹ ವಿವರಣಾ ಪತ್ರ, ಇತ್ಯಾದಿ
7. ರಿಜಿಸ್ಟರು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು
8. ನೋಂದಣಿಯಾಗಿಲ್ಲದಿರುವ ವಿವಾಹವನ್ನು ಅಸಿಂಧುಗೊಳಿಸತಕ್ಕದ್ದಲ್ಲ

### ಅಧ್ಯಾಯ – III
### ವಧು–ವರದಕ್ಷಿಣೆ

9. ವಧು–ವರದಕ್ಷಿಣೆ ನೀಡುವುದನ್ನು ಮತ್ತು ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ
10. ವಧು–ವರದಕ್ಷಿಣೆ ನೀಡುವುದಕ್ಕೆ ಅಥವಾ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಒಪ್ಪಂದ ಶೂನ್ಯವಾಗಿರುವುದು
11. ವರದಕ್ಷಿಣೆಯು ಪತ್ನಿಯ ಅಥವಾ ಆಕೆಯ ವಾರಸುದಾರರ ಪ್ರಯೋಜನಕ್ಕಾಗಿ ಇರತಕ್ಕದ್ದು

### ಅಧ್ಯಾಯ – IV
### ವೈಭವದ ವಿವಾಹದ ತೆರಿಗೆ

12. ವೈಭವದ ವಿವಾಹ ತೆರಿಗೆಯನ್ನು ವಿಧಿಸುವುದು
13. ವಿವಾಹ ತೆರಿಗೆಯನ್ನು ವಿಧಿಸುವುದು ಮತ್ತು ವಸೂಲು ಮಾಡುವುದು

### ಅಧ್ಯಾಯ – V
### ಅಂತರ್ಜಾತೀಯ ವಿವಾಹಗಳು

14. ಅಂತರ್ಜಾತಿಯ ವಿವಾಹಗಳು

### ಅಧ್ಯಾಯ – VI
### ಕೆಲವು ನಿರ್ಬಂಧಗಳು

15. ವಿವಾಹಗಳ ಸಂಬಂಧದಲ್ಲಿ ಆಹಾರ ಪದಾರ್ಥಗಳ ತಯಾರಿಕೆ ಮತ್ತು ಸೇವನೆ ಮೇಲೆ ನಿರ್ಬಂಧ
16. ಉಡುಗೊರೆಗಳನ್ನು ನಿಷೇಧಿಸಲಾಗಿದೆ

### ಅಧ್ಯಾಯ – VII
### ಅಪರಾಧಗಳು ಮತ್ತು ದಂಡಗಳು

17. 5ನೇ ಪ್ರಕರಣದ ಮೇರೆಗೆ ವಿವರಣ ಪತ್ರವನ್ನು ನೀಡಲು ಅಥವಾ ಕಳುಹಿಸಲು ತಪ್ಪಿದಕ್ಕಾಗಿ ಅಥವಾ ವಿವರಣ ಪತ್ರದಲ್ಲಿ ಸುಳ್ಳು ವಿವರ ನೀಡಿದ್ದಕ್ಕಾಗಿ ದಂಡನೆ.
18. ವಿವರಣ ಪತ್ರ ದಾಖಲು ಮಾಡಿಕೊಳ್ಳಲು ತಪ್ಪಿದ್ದಕ್ಕೆ ದಂಡನೆ
19. ರಿಜಿಸ್ಟರನ್ನು ಬಚ್ಚಿಡುವುದು, ನಾಶಪಡಿಸುವುದು ಅಥವಾ ಮಾರ್ಪಡಿಸುವುದಕ್ಕಾಗಿ ದಂಡನೆ
20. ವಧು–ವರದಕ್ಷಿಣೆ ನೀಡುವುದಕ್ಕಾಗಿ ತೆಗೆದುಕೊಳ್ಳುವುದಕ್ಕಾಗಿ ಅಥವಾ ಕೇಳುವುದಕ್ಕಾಗಿ ದಂಡನೆ
21. ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ

22. ವಿವಾಹದ ಯಾರೇ ಪಕ್ಷಕಾರನಿಗೆ ವಿವಾಹದ ಹಕ್ಕುಗಳು ಮತ್ತು ವಿಶೇಷ ಹಕ್ಕುಗಳು ದೊರಕದಂತೆ ಮಾಡಿದ್ದಕ್ಕೆ ದಂಡನೆ
23. 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಿವರ ಪಟ್ಟಿಯನ್ನು ಸಲ್ಲಿಸಲು ತಪ್ಪಿದ್ದಕ್ಕಾಗಿ ದಂಡನೆ
24. 15ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ
25. 16ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ
26. ಅಪರಾಧಗಳು ಸಂಜ್ಞೇಯವಾದವುಗಳು ಮತ್ತು ಜಾಮೀನೀಯವಲ್ಲದವುಗಳು ಆಗಿರತಕ್ಕದ್ದು.
27. ರುಜುವಾತಿನ ಭಾರ.

**ಅಧ್ಯಾಯ – VIII**
**ಸಂಕೀರ್ಣ**

28. ಈ ಅಧಿನಿಯಮದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಸಂರಕ್ಷಣೆ
29. ರಿಜಿಸ್ಟ್ರಾರ್‌ನು ಲೋಕನೌಕರನಾಗಿರುವುದು
30. ನಿಯಮಗಳನ್ನು ರಚಿಸಲು ಅಧಿಕಾರ
31. ಈ ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರತಕ್ಕದ್ದು
32. 1949ರ ಮೈಸೂರು ಅಧಿನಿಯಮ 69ರ ತಿದ್ದುಪಡಿ
33. 1959ರ ಕರ್ನಾಟಕ ಅಧಿನಿಯಮ 10ರ ತಿದ್ದುಪಡಿ
34. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ
35. 1966ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ
36. ನಿರಸನ ಮತ್ತು ಉಳಿಸುವಿಕೆಗಳು

**ಅನುಸೂಚಿಗಳು**

**1984ರ ಕರ್ನಾಟಕ ಅಧಿನಿಯಮ ಸಂಖ್ಯೆ. 2**

**(1984ರ ಫೆಬ್ರವರಿ ಇಪ್ಪತ್ತೈದರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಗಿದೆ)**

**ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976**

**(1983ರ ಜುಲೈ ಹದಿನೈದರಂದು ರಾಷ್ಟ್ರಪತಿಯವರ ಸಮ್ಮತಿ ಪಡೆದಿದೆ)**

**ಕರ್ನಾಟಕ ರಾಜ್ಯದಲ್ಲಿ ವಿವಾಹಗಳ ನೋಂದಣಿಗೆ ಮತ್ತು ಇತರ ಕೆಲವು ವಿಷಯಗಳಿಗೆ ಏಕರೂಪದ ಕಾನೂನನ್ನು ಉಪಬಂಧಿಸುವ ಒಂದು ಅಧಿನಿಯಮ.**

ವಿವಾಹಗಳ ಕಡ್ಡಾಯ ನೋಂದಣಿಗೆ ಉಪಬಂಧ ಕಲ್ಪಿಸುವುದು, ವಧು-ವರದಕ್ಷಿಣೆ ನೀಡುವುದನ್ನು ಅಥವಾ ತೆಗೆದುಕೊಳ್ಳುವುದನ್ನು ನಿಷೇಧಿಸುವುದು, ಕೆಲವು ವಿವಾಹಗಳ ಮೇಲೆ ವೈಭವ ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಅವುಗಳಿಗೆ ಸಂಬಂಧಿಸಿದ ಕೆಲವು ವಿಷಯಗಳಿಗೆ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

**ಅಧ್ಯಾಯ-I**
**ಪ್ರಾರಂಭಿಕ**

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

(ಎ) "ಗೊತ್ತುಪಡಿಸಿದ ದಿನ" ಎಂದರೆ I ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಅಧಿಸೂಚಿಸಿದ ದಿನಾಂಕ ಎಂದು ಅರ್ಥ.

(ಬಿ) "ವಿವಾಹ ಮಾಡಿಕೊಳ್ಳುವುದು" ಎಂದರೆ ಯಾವುದೇ ವಿಧಾನದಲ್ಲಿ ಅಥವಾ ರೀತಿಯಲ್ಲಿ ವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದು ಅಥವಾ ಮಾಡಿಕೊಳ್ಳುವುದು ಎಂದು ಅರ್ಥ.

(ಸಿ) "ವಧು-ವರದಕ್ಷಿಣೆ " ಎಂದರೆ,-

(i) ವಿವಾಹದ ಒಬ್ಬ ಪಕ್ಷಕಾರರು ವಿವಾಹದ ಮತ್ತೊಬ್ಬ ಪಕ್ಷಕಾರರಿಗೆ; ಅಥವಾ

(ii) ಒಂದು ವಿವಾಹದ ಯಾರೇ ಪಕ್ಷಕಾರರ ತಂದೆ ತಾಯಿಯರು ಅಥವಾ ಇತರ ಯಾರೇ ವ್ಯಕ್ತಿಯು ಆ ವಿವಾಹದ ಮತ್ತೊಬ್ಬ ಪಕ್ಷಕಾರರಿಗೆ ಅಥವಾ ಇತರ ಯಾರೇ ವ್ಯಕ್ತಿಗೆ

- ವಿವಾಹದ ಪಕ್ಷಕಾರರ ವಿವಾಹಕ್ಕಾಗಿ ಪ್ರತಿಫಲವಾಗಿ ವಿವಾಹದ ಸಮಯದಲ್ಲಿ ಅಥವಾ ಮುಂಚೆ ಅಥವಾ ತರುವಾಯ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನೀಡಿದ ಅಥವಾ ನೀಡಲು ಒಪ್ಪಿಕೊಂಡಿರುವ ಯಾವುದೇ ಸ್ವತ್ತು (ನಗದೂ ಸೇರಿದಂತೆ) ಅಥವಾ ಬೆಲೆಬಾಳುವ ಭದ್ರತೆ ಎಂದು ಅರ್ಥ. ಆದರೆ ಮುಸ್ಲಿಂ ವೈಯಕ್ತಿಕ ಕಾನೂನು (ಷರಿಯತ್) ಅನ್ವಯಿಸುವ ವ್ಯಕ್ತಿಗಳ ಸಂದರ್ಭದಲ್ಲಿ ಡೊವರ್ ಅಥವಾ ಮಹರ್ ಇದರಲ್ಲಿ ಸೇರುವುದಿಲ್ಲ.

**ವಿವರಣೆ.**– (1) ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಈ ಮುಂದಿನಂತೆ ಘೋಷಿಸಲಾಗಿದೆ,–

(i) ವಿವಾಹದ ಸಮಯದಲ್ಲಿ ಅಥವಾ ಮುಂಚೆ ಅಥವಾ ತರುವಾಯ ನಗದು ರೂಪದಲ್ಲಿ, ಆಭರಣಗಳ ರೂಪದಲ್ಲಿ, ವಸ್ತ್ರಗಳ ಅಥವಾ ಇತರ ವಸ್ತುಗಳ ರೂಪದಲ್ಲಿ ನೀಡಿದ ಯಾವುದೇ ಉಡುಗೊರೆಗಳ ಒಟ್ಟು ಮೌಲ್ಯವು ಐದು ನೂರು ರೂಪಾಯಿಗಳನ್ನು ಮೀರಿಲ್ಲವೋ ಆ ಯಾವುವೇ ಉಡುಗೊರೆಗಳನ್ನು, ಅವುಗಳನ್ನು ಸದರಿ ಪಕ್ಷಕಾರರ ವಿವಾಹದ ಪ್ರತಿಫಲವಾಗಿ ನೀಡಿದ್ದ ಹೊರತು, ಅವುಗಳನ್ನು ಈ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ವಧು – ವರದಕ್ಷಿಣೆ ಎಂದು ಭಾವಿಸತಕ್ಕದ್ದಲ್ಲ.

(ii) ತನ್ನ ಮಗಳನ್ನು ಅಥವಾ ಇನ್ನಾವುದೇ ಇತರ ಸಂಬಂಧಿಯನ್ನು ವಿವಾಹ ಮಾಡಿ ಕೊಡುವ ಉದ್ದೇಶದಿಂದ ಒಬ್ಬ ಹುಡುಗನಿಗೆ, ಆತನು ಸಂಬಂಧಿಯಾಗಿರಲಿ ಅಥವಾ ಆಗಿಲ್ಲದಿರಲಿ ಆತನ ಶಿಕ್ಷಣ, ವ್ಯಾಪಾರ ಅಥವಾ ಬೇರೆ ಯಾವುದೇ ಉದ್ದೇಶಕ್ಕೆ ಹಣಕಾಸು ನೆರವು ನೀಡುವ ಯಾರೇ ವ್ಯಕ್ತಿಯು ವಧು–ವರದಕ್ಷಿಣೆ ಕೊಡುತ್ತಿರುವುದಾಗಿ ಮತ್ತು ಅಂಥ ನೆರವನ್ನು ಹಾಗೆ ನೆರವು ಸ್ವೀಕರಿಸುವ ಹುಡುಗನು ವಧು–ವರದಕ್ಷಿಣೆ ಸ್ವೀಕರಿಸುತ್ತಿರುವುದಾಗಿ ಭಾವಿಸತಕ್ಕದ್ದು.

(2) "ಬೆಲೆ ಬಾಳುವ ಭದ್ರತೆ" ಎಂಬ ಪದಾವಳಿಯು ಭಾರತ ದಂಡ ಸಂಹಿತೆಯ 30ನೇ ಪ್ರಕರಣದಲ್ಲಿ ಹೊಂದಿರುವ ಅರ್ಥವನ್ನೇ ಹೊಂದಿರುತ್ತದೆ;

(ಡಿ) ವಿವಾಹದ ಸಂಬಂಧದಲ್ಲಿ "ವಿವಾಹದ ವೆಚ್ಚಗಳು" ಎಂದರೆ ವಿವಾಹದ ಪಕ್ಷಕಾರರು ಮತ್ತು ಅದನ್ನು ನೆರವೇರಿಸುವ ವ್ಯಕ್ತಿಯು ಅದಕ್ಕೆ ಸಂಬಂಧಿಸಿದಂತೆ ಮಾಡಿದ ಎಲ್ಲಾ ವೆಚ್ಚಗಳು ಎಂದು ಅರ್ಥ;

(ಇ) "ವಿವಾಹವು" ಪುನರ್ ವಿವಾಹವನ್ನು ಒಳಗೊಳ್ಳುತ್ತದೆ;

(ಎಫ್) "ವಿವಾಹ ತೆರಿಗೆ" ಎಂದರೆ 12ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ವೈಭವದ ವಿವಾಹ ತೆರಿಗೆ ಎಂದು ಅರ್ಥ;

(ಜಿ) "ವಿವಾಹ ತೆರಿಗೆ ಅಧಿಕಾರಿ' ಎಂದರೆ 13ನೇ ಪ್ರಕರಣದ ಮೇರೆಗೆ ನೇಮಿಸಲಾದ ವೈಭವದ ವಿವಾಹ ತೆರಿಗೆ ಅಧಿಕಾರಿ ಎಂದು ಅರ್ಥ;

(ಹೆಚ್) "ವಿವರಣ ಪತ್ರ" ಎಂದರೆ 5 ಮತ್ತು 6ನೇ ಪ್ರಕರಣಗಳಲ್ಲಿ ಹೇಳಲಾಗಿರುವ ವಿವಾಹ ವಿವರಣ ಪತ್ರ ಎಂದು ಅರ್ಥ;

(ಐ) "ರಿಜಿಸ್ಟರು" ಎಂದರೆ ಈ ಅಧಿನಿಯಮದ ಮೇರೆಗೆ ಇಟ್ಟುಕೊಂಡು ಬಂದ ವಿವಾಹಗಳ ರಿಜಿಸ್ಟರು ಎಂದು ಅರ್ಥ;

(ಜೆ) "ರಿಜಿಸ್ಟ್ರಾರ್" ಎಂದರೆ 4ನೇ ಪ್ರಕರಣದ ಮೇರೆಗೆ ನೇಮಕಗೊಂಡಿರುವಂಥ ವಿವಾಹಗಳ ರಿಜಿಸ್ಟ್ರಾರ್ ಎಂದು ಅರ್ಥ;

(ಕೆ) "ರಿಜಿಸ್ಟ್ರಾರ್ ಜನರಲ್" ಎಂದರೆ ಜನನ, ಮರಣ ಮತ್ತು ವಿವಾಹಗಳ ನೋಂದಣಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನೇಮಕಗೊಂಡಿರುವಂಥ, ಜನನ, ಮರಣ ಮತ್ತು ವಿವಾಹಗಳ ರಿಜಿಸ್ಟ್ರಾರ್ ಜನರಲ್ ಎಂದು ಅರ್ಥ.

## ಅಧ್ಯಾಯ–II
## ವಿವಾಹಗಳ ನೋಂದಣಿ

**3. ಪ್ರತಿಯೊಂದು ವಿವಾಹವನ್ನು ನೋಂದಣಿ ಮಾಡಿಸತಕ್ಕದ್ದು.**–ಗೊತ್ತುಪಡಿಸಿದ ದಿನದಂದು ಅಥವಾ ತರುವಾಯ ನೆರವೇರಿದ ಪ್ರತಿಯೊಂದು ವಿವಾಹವನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ನೋಂದಣಿ ಮಾಡತಕ್ಕದ್ದು.

**4. ವಿವಾಹಗಳ ರಿಜಿಸ್ಟ್ರಾರನ ನೇಮಕ, ಮೊದಲಾದವು.–** (1) ಈ ಅಧಿನಿಯಮದ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕೆ ಅಥವಾ ಪ್ರದೇಶಗಳಿಗೆ ಅದು ಅವಶ್ಯವೆಂದು ಭಾವಿಸುವಷ್ಟು ಸಂಖ್ಯೆಯ ವಿವಾಹಗಳ ರಿಜಿಸ್ಟ್ರಾರರನ್ನು ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು.

(2) ರಿಜಿಸ್ಟ್ರಾರನು, ವಿವಾಹದ ರಿಜಿಸ್ಟ್ರಾರನ್ನು ಮತ್ತು ಗೊತ್ತುಪಡಿಸಬಹುದಾದಂಥ ಇತರ ರಿಜಿಸ್ಟರುಗಳನ್ನು ಗೊತ್ತುಪಡಿಸಿದ ರೀತಿಯಲ್ಲಿ ಇಟ್ಟುಕೊಂಡು ಬರತಕ್ಕದ್ದು.

**5. ವಿವಾಹಗಳ ವಿವರಣಪತ್ರ.–** (1) ವಿವಾಹದ ಪಕ್ಷಕಾರರು ಅನುಸೂಚಿ 'ಎ' ಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಒಂದು ವಿವರಣ ಪತ್ರವನ್ನು ಸಿದ್ಧಪಡಿಸಿ ಅದಕ್ಕೆ ಸಹಿ ಮಾಡತಕ್ಕದ್ದು ಮತ್ತು ಸದರಿ ವಿವರಣಪತ್ರವನ್ನು ಯಾವ ಪ್ರದೇಶದಲ್ಲಿ ವಿವಾಹ ನೆರವೇರಿತೋ ಆ ಪ್ರದೇಶದ ರಿಜಿಸ್ಟ್ರಾರನಿಗೆ ವಿವಾಹದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ದ್ವಿಪ್ರತಿಯಲ್ಲಿ ಕೊಡತಕ್ಕದ್ದು ಅಥವಾ ನೋಂದಾಯಿತ ಅಂಚೆ ಮೂಲಕ ಕಳುಹಿಸಿಕೊಡತಕ್ಕದ್ದು.

(2) ವಿವರಣಪತ್ರದ ಜೊತೆಗೆ ನ್ಯಾಯಾಲಯ ಶುಲ್ಕದ ಸ್ಟಾಂಪುಗಳ ರೂಪದಲ್ಲಿ ಗೊತ್ತುಪಡಿಸಿದ ಶುಲ್ಕವನ್ನು ಸಲ್ಲಿಸತಕ್ಕದ್ದು ಮತ್ತು ಅದನ್ನು ಗೊತ್ತುಪಡಿಸಲಾದ ವ್ಯಕ್ತಿಯು ಧೃಡೀಕರಿಸಿರತಕ್ಕದ್ದು.

(3) ವಿವರಣ ಪತ್ರವನ್ನು ಸ್ವೀಕರಿಸಿದ ಮೇಲೆ, ರಿಜಿಸ್ಟ್ರಾರನು ಅದನ್ನು ಕಡತಕ್ಕೆ ಸೇರಿಸತಕ್ಕದ್ದು ಅದರ ವಿವರಗಳನ್ನು ರಿಜಿಸ್ಟರಿನಲ್ಲಿ ನಮೂದಿಸಿ ಅದರ ದ್ವಿಪ್ರತಿಯನ್ನು ರಿಜಿಸ್ಟ್ರಾರ್ ಜನರಲ್‌ನಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಗೊತ್ತುಪಡಿಸಬಹುದಾದ ನಮೂನೆ ಮತ್ತು ರೀತಿಯಲ್ಲಿ ವಿವಾಹ ಪ್ರಮಾಣಪತ್ರವನ್ನು ನೀಡತಕ್ಕದ್ದು.

**6. ಮೂವತ್ತು ದಿನಗಳ ತರುವಾಯ ಸಲ್ಲಿಸಲಾದ ವಿವಾಹ ವಿವರಣ ಪತ್ರ, ಇತ್ಯಾದಿ.–** (1) ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗಿರದ ಒಂದು ವಿವಾಹದ ಪಕ್ಷಕಾರರಿಗೆ ರಿಜಿಸ್ಟ್ರಾರ್‌ನು ತನ್ನ ಮುಂದೆ ಹಾಜರಾಗುವಂತೆ ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ಗೊತ್ತುಪಡಿಸಿದ ಶುಲ್ಕದೊಂದಿಗೆ ವಿವಾಹದ ವಿವರಣಪತ್ರಕ್ಕೆ ಸಹಿ ಮಾಡಿಸಿ ಅದನ್ನು ಪಡೆದುಕೊಳ್ಳಲು ತಾನಾಗಿಯೇ ಅಥವಾ ಅನ್ಯಥಾ ನೋಟೀಸುಗಳನ್ನು ನೀಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ವಿವರಣ ಪತ್ರವನ್ನು ಸ್ವೀಕರಿಸಿದ ಮೇಲೆ, ರಿಜಿಸ್ಟ್ರಾರ್‌ನು ಅದನ್ನು ಕಡತಕ್ಕೆ ಸೇರಿಸತಕ್ಕದ್ದು, ಅದರ ವಿವರಗಳನ್ನು ರಿಜಿಸ್ಟರಿನಲ್ಲಿ ನಮೂದಿಸಿ ಅದರ ದ್ವಿಪ್ರತಿಯನ್ನು ರಿಜಿಸ್ಟ್ರಾರ್ ಜನರಲ್‌ನಿಗೆ ಕಳುಹಿಸಿಕೊಡತಕ್ಕದ್ದು ಮತ್ತು 5ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ವಿವಾಹ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, 17ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾರೇ ವ್ಯಕ್ತಿಯ ಹೊಣೆಗಾರಿಕೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**7. ರಿಜಿಸ್ಟರು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.–** ಈ ಅಧಿನಿಯಮದ ಮೇರೆಗೆ ಇಟ್ಟುಕೊಂಡು ಬರಲಾದ ರಿಜಿಸ್ಟರನ್ನು ಎಲ್ಲಾ ಯುಕ್ತ ಕಾಲದಲ್ಲೂ ಪರಿಶೀಲನೆಗೆ ಮುಕ್ತವಾಗಿರಿಸತಕ್ಕದ್ದು ಮತ್ತು ಅದರಿಂದ ಪ್ರಮಾಣೀಕೃತ ಉದ್ಧೃತ ಭಾಗಗಳನ್ನು ಗೊತ್ತುಪಡಿಸಿದ ಶುಲ್ಕವನ್ನು ಸಂದಾಯ ಮಾಡಿ ಅರ್ಜಿ ಸಲ್ಲಿಸಿದ ಮೇಲೆ ರಿಜಿಸ್ಟ್ರಾರನು ಅವುಗಳನ್ನು ನೀಡತಕ್ಕದ್ದು. ವಿವರಣ ಪತ್ರದಲ್ಲಿ ಅಥವಾ ರಿಜಿಸ್ಟರನಲ್ಲಿ ಅಥವಾ ಅದರ ಉದ್ಧೃತ ಭಾಗದಲ್ಲಿ ಅಥವಾ 5 ನೇ ಪ್ರಕರಣದ ಅಥವಾ 6ನೇ ಪ್ರಕರಣದ ಮೇರೆಗೆ ನೀಡಿದ ವಿವಾಹ ಪ್ರಮಾಣ ಪತ್ರದಲ್ಲಿ ಇರುವ ನಮೂದುಗಳು ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗಿರತಕ್ಕದ್ದು ಮತ್ತು ಅವುಗಳಲ್ಲಿ ಒಳಗೊಂಡ ಹೇಳಿಕೆಯ ರುಜುವಾತಾಗಿರತಕ್ಕದ್ದು.

**8. ನೋಂದಣಿಯಾಗಿಲ್ಲದಿರುವ ವಿವಾಹವನ್ನು ಅಸಿಂಧುಗೊಳಿಸತಕ್ಕದ್ದಲ್ಲ.–** ರಾಜ್ಯದಲ್ಲಿ ನೆರವೇರಿದ ಯಾವುದೇ ವಿವಾಹವನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಲಾಗಿಲ್ಲ ಅಥವಾ ರಿಜಿಸ್ಟ್ರಾರನಿಗೆ ವಿವರಣ ಪತ್ರವನ್ನು ಕೊಟ್ಟಿಲ್ಲ ಅಥವಾ ಕಳುಹಿಸಿಲ್ಲ ಅಥವಾ ಆ ವಿವರಣ ಪತ್ರವು ದೋಷಯುಕ್ತ, ಅಕ್ರಮ ಅಥವಾ ಅಸಮರ್ಪಕವಾಗಿದೆಯೆಂಬ ಸಂಗತಿಯ ಕಾರಣ ಮಾತ್ರದಿಂದಲೇ ಅದು ಅಸಿಂಧುವಾಗಿದೆಯೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ–III
## ವಧು–ವರದಕ್ಷಿಣೆ

**9. ವಧು–ವರದಕ್ಷಿಣೆ ನೀಡುವುದನ್ನು ಮತ್ತು ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ.–** ಯಾರೇ ವ್ಯಕ್ತಿಯು ಗೊತ್ತುಪಡಿಸಿದ ದಿನಾಂಕದ ತರುವಾಯ ವಧು–ವರದಕ್ಷಿಣೆಗಾಗಿ ಒತ್ತಾಯ ಮಾಡತಕ್ಕದ್ದಲ್ಲ, ನೀಡತಕ್ಕದ್ದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ ಅಥವಾ ವಧು–ವರದಕ್ಷಿಣೆಗೆ ಒತ್ತಾಯ ಮಾಡುವುದಕ್ಕೆ, ನೀಡುವುದಕ್ಕೆ ಅಥವಾ ತೆಗೆದುಕೊಳ್ಳುವುದಕ್ಕೆ ದುಷ್ಪ್ರೇರಣೆ ಮಾಡತಕ್ಕದ್ದಲ್ಲ.

**10. ವಧು–ವರದಕ್ಷಿಣೆ ನೀಡುವುದಕ್ಕೆ ಅಥವಾ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಒಪ್ಪಂದ ಶೂನ್ಯವಾಗಿರುವುದು:–** ವಧು–ವರದಕ್ಷಿಣೆ ನೀಡುವುದಕ್ಕೆ ಅಥವಾ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಯಾವುದೇ ಒಪ್ಪಂದವು, ಅದು ಲಿಖಿತದಲ್ಲಿರಲಿ ಅಥವಾ ಅನ್ಯಥಾ ಇರಲಿ ಶೂನ್ಯವಾಗಿರತಕ್ಕದ್ದು.

**11. ವರದಕ್ಷಿಣೆಯು ಪತ್ನಿಯ ಅಥವಾ ಆಕೆಯ ವಾರಸುದಾರರ ಪ್ರಯೋಜನಕ್ಕಾಗಿ ಇರತಕ್ಕದ್ದು.–** (1) ಒಬ್ಬ ಮಹಿಳೆಯ ವಿವಾಹದ ಸಂಬಂಧವಾಗಿ ನೀಡಿದ ವರದಕ್ಷಿಣೆಯನ್ನು ಆ ಮಹಿಳೆಯ ಹೊರತಾಗಿ ಯಾರೇ ವ್ಯಕ್ತಿಯು ಅದನ್ನು ಸ್ವೀಕರಿಸಿರುವಲ್ಲಿ,–

(ಎ) ವಿವಾಹಕ್ಕೆ ಮೊದಲು ವರದಕ್ಷಿಣೆಯನ್ನು ಸ್ವೀಕರಿಸಿದ್ದರೆ, ವಿವಾಹದ ದಿನಾಂಕದ ತರುವಾಯ ಒಂದು ವರ್ಷದೊಳಗೆ; ಅಥವಾ

(ಬಿ) ವಿವಾಹದ ಕಾಲದಲ್ಲಿ ಅಥವಾ ಆ ತರುವಾಯ ವರದಕ್ಷಿಣೆಯನ್ನು ಸ್ವೀಕರಿಸಿದ್ದರೆ ಅದನ್ನು ಸ್ವೀಕರಿಸಿದ ತರುವಾಯ ಒಂದು ವರ್ಷದೊಳಗೆ; ಅಥವಾ

(ಸಿ) ಮಹಿಳೆಯು ಅಪ್ರಾಪ್ತ ವಯಸ್ಕಳಾಗಿರುವಾಗ ವರದಕ್ಷಿಣೆಯನ್ನು ಸ್ವೀಕರಿಸಿದ್ದರೆ, ಆಕೆ ಹದಿನೆಂಟು ವರ್ಷ ವಯಸ್ಸನ್ನು ತಲುಪಿದ ನಂತರ ಒಂದು ವರ್ಷದೊಳಗೆ

– ಆ ಮಹಿಳೆಗೆ ಅದನ್ನು ವರ್ಗಾಯಿಸತಕ್ಕದ್ದು ಮತ್ತು ಹಾಗೆ ವರ್ಗಾಯಿಸುವವರೆಗೆ ಆ ಮಹಿಳೆಯ ಪ್ರಯೋಜನಕ್ಕಾಗಿ ಅದನ್ನು ಇಟ್ಟುಕೊಳ್ಳತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತಿಗೆ ಹಕ್ಕುಳ್ಳ ಮಹಿಳೆಯು ಅದನ್ನು ಸ್ವೀಕರಿಸುವ ಮೊದಲೇ ಮರಣ ಹೊಂದಿದರೆ, ಆಕೆಯ ವಾರಸುದಾರರು ಅದನ್ನು ತಾತ್ಕಾಲಿಕವಾಗಿ ಇಟ್ಟುಕೊಂಡಿರುವ ವ್ಯಕ್ತಿಯಿಂದ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದು.

(3) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, 21ನೇ ಪ್ರಕರಣದ ಉಪಬಂಧಗಳ ಮೇರೆಗಿನ ಯಾರೇ ವ್ಯಕ್ತಿಯ ಹೊಣೆಗಾರಿಕೆಗೆ ಬಾಧಕ ಉಂಟುಮಾಡತಕ್ಕದ್ದಲ್ಲ.

## ಅಧ್ಯಾಯ–IV
## ವೈಭವದ ವಿವಾಹದ ತೆರಿಗೆ

**12. ವೈಭವದ ವಿವಾಹ ತೆರಿಗೆಯನ್ನು ವಿಧಿಸುವುದು.–** (1) ಐದು ಸಾವಿರ ರೂಪಾಯಿಗಳನ್ನು ಮೀರಿದ ವೆಚ್ಚದಲ್ಲಿ, ಗೊತ್ತುಪಡಿಸಿದ ದಿನಾಂಕದ ತರುವಾಯ ನೆರವೇರಿಸಿದ ಪ್ರತಿಯೊಂದು ವಿವಾಹವನ್ನು, ಅದಕ್ಕೆ ಸಂಬಂಧಪಟ್ಟ ಯಾವುದೇ ಸಮಾರಂಭವು ಸೇರಿದಂತೆ, ವೈಭವದ ವಿವಾಹವೆಂದು ಪರಿಗಣಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅಂಥ ವಿವಾಹದ ಪಕ್ಷಕಾರರಿಂದ ಮತ್ತು ಅಂಥ ವಿವಾಹವನ್ನು ನೆರವೇರಿಸುತ್ತಿರುವ ವ್ಯಕ್ತಿಗಳಿಗೆ ಅನುಸೂಚಿ 'ಬಿ' ಯಲ್ಲಿ ನಿರ್ದಿಷ್ಟಪಡಿಸಿರುವ ದರದಲ್ಲಿ ವೈಭವದ ವಿವಾಹ ತೆರಿಗೆ ಎಂದು ಕರೆಯಲಾಗುವ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ವಸೂಲು ಮಾಡತಕ್ಕದ್ದು.

(2) ಈ ಪ್ರಕರಣದ ಮತ್ತು 2ನೇ ಪ್ರಕರಣದ (ಡಿ) ಖಂಡದ ಉದ್ದೇಶಕ್ಕಾಗಿ ವಿವಾಹದ ಪಕ್ಷಕಾರರ ತಂದೆ ತಾಯಿಯರನ್ನು ಅಥವಾ ಪೋಷಕರನ್ನು, ಅನ್ಯಥಾ ರುಜುವಾತಾದ ಹೊರತು, ವಿವಾಹವನ್ನು ನೆರವೇರಿಸಿದ ವ್ಯಕ್ತಿಗಳೆಂದು ಭಾವಿಸತಕ್ಕದ್ದು.

**13. ವಿವಾಹ ತೆರಿಗೆಯನ್ನು ವಿಧಿಸುವುದು ಮತ್ತು ವಸೂಲು ಮಾಡುವುದು.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ 12ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ವಿವಾಹ ತೆರಿಗೆಯನ್ನು ವಿಧಿಸುವುದಕ್ಕಾಗಿ ಮತ್ತು ವಸೂಲು ಮಾಡುವುದಕ್ಕಾಗಿ ಅದು ಅಗತ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ವೈಭವದ ವಿವಾಹ ತೆರಿಗೆ ಅಧಿಕಾರಿಗಳನ್ನು ನೇಮಿಸಬಹುದು ಮತ್ತು ಹಾಗೆ ನೇಮಿಸಲಾದ ಅಧಿಕಾರಿಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದಲ್ಲಿ ಅಥವಾ ಪ್ರದೇಶಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(2) ವಿವಾಹದ ಸಂಬಂಧದಲ್ಲಿ ವಿವಾಹ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ವಿವಾಹದ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ವಿವಾಹ ತೆರಿಗೆ ಅಧಿಕಾರಿಗೆ ಗೊತ್ತುಪಡಿಸಿದ ನಮೂನೆಯಲ್ಲಿ ವಿವಾಹದ ವೆಚ್ಚಗಳನ್ನು ಸೂಚಿಸುವಂಥ ವಿವರಪಟ್ಟಿಕೆಯನ್ನು ಸಲ್ಲಿಸತಕ್ಕದ್ದು.

(3) (ಎ) (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿರುವ ವಿವರಪಟ್ಟಿಯು ಸರಿಯಾಗಿದೆಯೆಂದು ವಿವಾಹ ತೆರಿಗೆ ಅಧಿಕಾರಿಗೆ ಮನದಟ್ಟಾದರೆ ಆತನು ಅದರ ಆಧಾರದ ಮೇಲೆ ಸಂದಾಯ ಮಾಡಬೇಕಾದ ವಿವಾಹ ತೆರಿಗೆ ಮೊಬಲಗನ್ನು ನಿರ್ಧರಿಸತಕ್ಕದ್ದು.

(ಬಿ) (2)ನೇ ಉಪಪ್ರಕರಣದ ಮೇರೆಗೆ ವಿವರಪಟ್ಟಿಕೆಯನ್ನು ಸಲ್ಲಿಸಲು ಹೊಣೆಗಾರನಾಗಿರುವ ಯಾರೇ ವ್ಯಕ್ತಿಯು ವಿವರಪಟ್ಟಿಕೆಯನ್ನು ಸಲ್ಲಿಸಲು ವಿಫಲನಾದರೆ ಅಥವಾ ವಿವಾಹ ತೆರಿಗೆ ಅಧಿಕಾರಿಯ ಅಭಿಪ್ರಾಯದಲ್ಲಿ ಅಸಮರ್ಪಕ ಅಥವಾ ಅಪೂರ್ಣ ವಿವರಪಟ್ಟಿಕೆಯನ್ನು ಸಲ್ಲಿಸಿದ್ದರೆ, ಅಂಥ ಅಧಿಕಾರಿಯು ವಿವಾಹದ ವೆಚ್ಚಗಳನ್ನು ನಿರ್ಧರಿಸಲು ಅಗತ್ಯವೆಂದು ಅವನು ಭಾವಿಸಬಹುದಾದಂಥ ಮಾಹಿತಿ ಮತ್ತು ವಿವರಗಳನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಒದಗಿಸುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳುವುದಕ್ಕೆ ಒಂದು ಸಮಂಜಸ ಅವಕಾಶವನ್ನು ಕೊಟ್ಟ ತರುವಾಯ ವಿವಾಹದ ವೆಚ್ಚಗಳನ್ನು ಮತ್ತು ಅಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಸಂದಾಯ ಮಾಡಬೇಕಾದ ವಿವಾಹ ತೆರಿಗೆಯ ಮೊಬಲಗನ್ನು ನಿರ್ಧರಿಸತಕ್ಕದ್ದು.

(4) ಸಂದಾಯ ಮಾಡಬೇಕಾದ ವಿವಾಹ ತೆರಿಗೆಯ ಮೊಬಲಗನ್ನು ನಿರ್ಧರಿಸಿ (3)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದ ಒಂದು ಪ್ರತಿಯನ್ನು, ಅದನ್ನು ಸಂದಾಯ ಮಾಡಲು ಬದ್ಧರಾದ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಜಾರಿಮಾಡತಕ್ಕದ್ದು ಮತ್ತು ಆ ಮೂಲಕ ಬಾಧಿತನಾದ ಯಾರೇ ವ್ಯಕ್ತಿಯು ಹಾಗೆ ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಗೊತ್ತುಪಡಿಸಿದ ಪ್ರಾಧಿಕಾರಿಗೆ ಅಪೀಲು ಸಲ್ಲಿಸಬಹುದು. ಆ ಪ್ರಾಧಿಕಾರಿಯು ಅಪೀಲುದಾರನಿಗೆ ಆತನ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶಕೊಟ್ಟ ತರುವಾಯ ತಾನು ಯುಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸತಕ್ಕದ್ದು.

(5) (3)ನೇ ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ ವಿವಾಹ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರರಾದ ವ್ಯಕ್ತಿ ಅಥವಾ ವ್ಯಕ್ತಿಗಳು ಅದನ್ನು (4) ನೇ ಉಪ ಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲು ಏನಾದರೂ ಇದ್ದರೆ, ಅದರಲ್ಲಿ ಮಾರ್ಪಾಟು ಮಾಡಿದಂತೆ ಅದನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗಿರತಕ್ಕದು ಮತ್ತು ಅದನ್ನು ಭೂ ಕಂದಾಯದ ಬಾಕಿಗಳಂತೆ ವಸೂಲು ಮಾಡತಕ್ಕದ್ದು.

## ಅಧ್ಯಾಯ– V
## ಅಂತರ್ಜಾತೀಯ ವಿವಾಹಗಳು

**14. ಅಂತರ್ಜಾತೀಯ ವಿವಾಹಗಳು.–** ಅಂತರ್ಜಾತೀಯ ವಿವಾಹದ ಪ್ರತಿಯೊಬ್ಬ ಪಕ್ಷಕಾರರೂ ಗೊತ್ತುಪಡಿಸಬಹುದಾದ ನಿಯಮಗಳಿಗೆ ಒಳಪಟ್ಟು, ಒಂದು ಸಾವಿರ ರೂಪಾಯಿಗಳ ಮಂಜೂರಾತಿಗೆ ಮತ್ತು ಗೊತ್ತುಪಡಿಸಬಹುದಾದಂಥ ಇತರ ಸೌಲಭ್ಯಗಳಿಗೆ ಅರ್ಹರಾಗಿರತಕ್ಕದ್ದು.

**ವಿವರಣೆ:–** "ಅಂತರ್ಜಾತೀಯ ವಿವಾಹ " ಎಂದರೆ ಬೇರೆ ಬೇರೆ ಧರ್ಮಗಳಿಗೆ ಅಥವಾ ಹಿಂದೂ ಧರ್ಮದಲ್ಲಿ ಬೇರೆ ಬೇರೆ ಜಾತಿಗಳಿಗೆ ಸೇರಿದ ಇಬ್ಬರು ವ್ಯಕ್ತಿಗಳ ನಡುವಿನ ವಿವಾಹ ಎಂದು ಅರ್ಥ.

## ಅಧ್ಯಾಯ– VI
## ಕೆಲವು ನಿರ್ಬಂಧಗಳು

**15. ವಿವಾಹಗಳ ಸಂಬಂಧದಲ್ಲಿ ಆಹಾರ ಪದಾರ್ಥಗಳ ತಯಾರಿಕೆ ಮತ್ತು ಸೇವನೆ ಮೇಲೆ ನಿರ್ಬಂಧ.–** ಯಾರೇ ವ್ಯಕ್ತಿಯು ವಿವಾಹಕ್ಕೆ ಸಂಬಂಧಿಸಿದಂತೆ, ಯಾವುದೇ ಒಂದು ದಿನದಂದು ಅಂಥ ವ್ಯಕ್ತಿಯ ಕುಟುಂಬದ ಸದಸ್ಯರೂ ಸೇರಿದಂತೆ ಐದು ನೂರಕ್ಕಿಂತ ಹೆಚ್ಚಿನ ಜನರಿಗೆ ಧಾನ್ಯಗಳಿಂದ ಅಥವಾ ದ್ವಿದಳ ಧಾನ್ಯಗಳಿಂದ ತಯಾರಿಸಿದ ಅಥವಾ ಇವುಗಳಿಂದ ಕೂಡಿರುವ ಯಾವುದೇ ಆಹಾರ ಪದಾರ್ಥವನ್ನು ಅಥವಾ ಸಿಹಿಯನ್ನು ಸೇವನೆಗಾಗಿ ತಯಾರಿಸತಕ್ಕದ್ದಲ್ಲ ಅಥವಾ ಬಡಿಸತಕ್ಕದ್ದಲ್ಲ, ವಿತರಿಸತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ ಅಥವಾ ಸೇವನೆಗಾಗಿ ತಯಾರಿಸುವಂತೆ ಅಥವಾ ಬಡಿಸುವಂತೆ, ವಿತರಿಸುವಂತೆ ಅಥವಾ ನೀಡುವಂತೆ ಮಾಡತಕ್ಕದ್ದಲ್ಲ.

**16. ಉಡುಗೊರೆಗಳನ್ನು ನಿಷೇಧಿಸಲಾಗಿದೆ.–** ವಿವಾಹದ ಒಬ್ಬ ಪಕ್ಷಕಾರನ ಅಥವಾ ಒಬ್ಬ ಪಕ್ಷಕಾರನ ತಂದೆ ತಾಯಿಯರ ಹೊರತಾದ ಯಾರೇ ವ್ಯಕ್ತಿಯು ವಿವಾಹದ ಒಬ್ಬ ಪಕ್ಷಕಾರನಿಗೆ ಅಥವಾ ಅಂಥ ಪಕ್ಷಕಾರನ ತಂದೆ ತಾಯಿಯರಿಗೆ ಅಥವಾ ವಿವಾಹ ನೇರವೇರಿಸುತ್ತಿರುವ ವ್ಯಕ್ತಿಗೆ ಅಂಥ ಪಕ್ಷಕಾರನ ವಿವಾಹದ ಸಮಯದಲ್ಲಿ ಅಥವಾ ವಿವಾಹಕ್ಕೆ ಸಂಬಂಧಿಸಿದ ಯಾವುದೇ ಇತರ ಕಾರ್ಯಕ್ರಮ ಅಥವಾ ಸಮಾರಂಭದ ಸಮಯದಲ್ಲಿ ಯಾವುದೇ ಉಡುಗೊರೆಯನ್ನು ನೀಡತಕ್ಕದ್ದಲ್ಲ.

(2) ವಿವಾಹದ ಯಾರೇ ಪಕ್ಷಕಾರನು ಅಥವಾ ವಿವಾಹದ ಒಬ್ಬ ಪಕ್ಷಕಾರನ ತಂದೆ ತಾಯಿಯರು ಅಥವಾ ವಿವಾಹವನ್ನು ನೇರವೇರಿಸುತ್ತಿರುವ ವ್ಯಕ್ತಿಯು (1)ನೇ ಉಪಪ್ರಕರಣದ ಮೂಲಕ ನಿಷೇಧಿಸಿರುವ ಉಡುಗೊರೆಗಳನ್ನು ಸ್ವೀಕರಿಸತಕ್ಕದ್ದಲ್ಲ.

## ಅಧ್ಯಾಯ– VII
## ಅಪರಾಧಗಳು ಮತ್ತು ದಂಡಗಳು

**17. 5ನೇ ಪ್ರಕರಣದ ಮೇರೆಗೆ ವಿವರಣ ಪತ್ರವನ್ನು ನೀಡಲು ಅಥವಾ ಕಳುಹಿಸಲು ತಪ್ಪಿದಕ್ಕಾಗಿ ಅಥವಾ ವಿವರಣ ಪತ್ರದಲ್ಲಿ ಸುಳ್ಳು ವಿವರ ನೀಡಿದ್ದಕ್ಕಾಗಿ ದಂಡನೆ.–** (1) ಯಾರೇ ವ್ಯಕ್ತಿಯು,–

(ಎ) ಗೊತ್ತುಪಡಿಸಿದ ದಿನದ ತರುವಾಯ 5ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ವಿವರಣ ಪತ್ರವನ್ನು ನೀಡಲು ಅಥವಾ ಕಳುಹಿಸಲು ಉದ್ದೇಶಪೂರ್ವಕವಾಗಿ ತಪ್ಪಿದಲ್ಲಿ ಅಥವಾ ನಿರ್ಲಕ್ಷಿಸಿದಲ್ಲಿ;

(ಬಿ) 5ನೇ ಪ್ರಕರಣದ ಮತ್ತು 6ನೇ ಪ್ರಕರಣದ ಮೇರೆಗೆ ರಿಜಿಸ್ಟ್ರಾರನಿಗೆ ಸಲ್ಲಿಸಿದ ಅಥವಾ ಕಳುಹಿಸಿದ ವಿವರಣ ಪತ್ರದಲ್ಲಿ ಸುಳ್ಳು ಅಥವಾ ಸುಳ್ಳೆಂದು ನಂಬಲು ಕಾರಣವಿರುವಂಥ ಯಾವುದೇ ಮಹತ್ವದ ವಿವರವನ್ನು ಆ ವಿವರಣೆಯಲ್ಲಿ ಸಲ್ಲಿಸಿದಲ್ಲಿ

– ಅಂಥ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ರಿಜಿಸ್ಟ್ರಾರನು ಅಥವಾ ರಾಜ್ಯ ಸರ್ಕಾರವು ಈ ಸಂಬಂಧವಾಗಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು (1)ನೇ ಉಪ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ಪ್ರಾಸಿಕ್ಯೂಷನ್ನಿಗೆ ಗುರಿಪಡಿಸಬಹುದು.

**18. ವಿವರಣಪತ್ರ ದಾಖಲು ಮಾಡಿಕೊಳ್ಳಲು ತಪ್ಪಿದ್ದಕ್ಕೆ ದಂಡನೆ:–** ತನಗೆ ಸಲ್ಲಿಸಿದ ಅಥವಾ ಕಳುಹಿಸಿದ ವಿವರಣ ಪತ್ರವನ್ನು ದಾಖಲು ಮಾಡಿಕೊಳ್ಳುವುದಕ್ಕೆ ಅಥವಾ 5ನೇ ಪ್ರಕರಣದ ಅಥವಾ 6ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ರಿಜಿಸ್ಟರಿನಲ್ಲಿ ನಮೂದುಗಳನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ತಪ್ಪಿದ ಯಾರೇ ರಿಜಿಸ್ಟ್ರಾರನು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**19. ರಿಜಿಸ್ಟರನ್ನು ಬಚ್ಚಿಡುವುದು, ನಾಶಪಡಿಸುವುದು ಅಥವಾ ಮಾರ್ಪಡಿಸುವುದಕ್ಕಾಗಿ ದಂಡನೆ.–** ವಿವರಣ ಪತ್ರವನ್ನು ಅಥವಾ ರಿಜಿಸ್ಟರನ್ನು ಅಥವಾ ಅದರ ಭಾಗವನ್ನು ಬಚ್ಚಿಡುವ ನಾಶಪಡಿಸುವ ಅಥವಾ ಅಪ್ರಾಮಾಣಿಕತೆ ಅಥವಾ ಮೋಸದಿಂದ ಮಾರ್ಪಡಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**20. ವಧು–ವರದಕ್ಷಿಣೆ ನೀಡುವುದಕ್ಕಾಗಿ, ತೆಗೆದುಕೊಳ್ಳುವುದಕ್ಕಾಗಿ ಅಥವಾ ಕೇಳುವುದಕ್ಕಾಗಿ ದಂಡನೆ.–** ಗೊತ್ತುಪಡಿಸಿದ ದಿನದ ತರುವಾಯ,–

(ಎ) ವಧು–ವರದಕ್ಷಿಣೆಯನ್ನು ನೀಡುವ ಅಥವಾ ತೆಗೆದುಕೊಳ್ಳುವ ಅಥವಾ ನೀಡುವಂತೆ ಅಥವಾ ತೆಗೆದುಕೊಳ್ಳುವಂತೆ ದುಷ್ಪ್ರೇರೇಪಿಸುವ;

(ಬಿ) ಯಾವುದೇ ವಧು–ವರದಕ್ಷಿಣೆಯನ್ನು ವಧುವಿನ ಅಥವಾ ವರನ ತಂದೆ ತಾಯಿಯಿಂದ ಅಥವಾ ಪೋಷಕರಿಂದ ಅಥವಾ ಇತರ ಯಾರೇ ವ್ಯಕ್ತಿಯಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕೇಳುವ

– ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**21. ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** 11ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಅದರಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಯಾವುದೇ ಸ್ವತ್ತನ್ನು ವರ್ಗಾಯಿಸುವಲ್ಲಿ ವಿಫಲನಾದ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳಿಗೆ ಕಡಿಮೆಯಿಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. ಅಂಥ ಯಾವುದೇ ದಂಡನೆಯು ಆ ವ್ಯಕ್ತಿಯನ್ನು 11ನೇ ಪ್ರಕರಣದ (1) ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಸ್ವತ್ತಿನ ವರ್ಗಾವಣೆಯ ಬಾಧ್ಯತೆಯಿಂದ ವಿಮುಕ್ತಗೊಳಿಸತಕ್ಕದ್ದಲ್ಲ.

**22. ವಿವಾಹದ ಯಾರೇ ಪಕ್ಷಕಾರನಿಗೆ ವಿವಾಹದ ಹಕ್ಕುಗಳು ಮತ್ತು ವಿಶೇಷ ಹಕ್ಕುಗಳು ದೊರಕದಂತೆ ಮಾಡಿದ್ದಕ್ಕೆ ದಂಡನೆ.–** ವಿವಾಹದ ತರುವಾಯ, ವಧು–ವರದಕ್ಷಿಣೆಯನ್ನು ಕೊಡದಿರುವ ಕಾರಣಕ್ಕಾಗಿ, ವಿವಾಹದ ಯಾರೇ ಪಕ್ಷಕಾರನು, ಆತನ ತಂದೆ ತಾಯಿಯ ಅಥವಾ ಅವನ ಪೋಷಕರ ಅಥವಾ ಇತರ ಯಾರೇ ವ್ಯಕ್ತಿಯ ಸಹಾಯದಿಂದ ಅಥವಾ ಅವರ ಸಹಾಯವಿಲ್ಲದೇ ಮತ್ತೊಬ್ಬ ಪಕ್ಷಕಾರನಿಗೆ ಅವನ ವಿವಾಹದ ಹಕ್ಕುಗಳು ಮತ್ತು ವಿಶೇಷ ಹಕ್ಕುಗಳು ದೊರಕದಂತೆ ಮಾಡಿದರೆ ಅಥವಾ ಇತರ ಪಕ್ಷಕಾರನನ್ನು ಹಿಂಸಿಸಿದರೆ ಅಥವಾ ಸಾಕಿ ಸಲಹಲು ನಿರಾಕರಿಸಿದರೆ, ಆತನ ಅಪರಾಧ ನಿರ್ಣಯವಾದ ಮೇಲೆ, ಆರು ತಿಂಗಳಿಗೆ ಕಡಿಮೆಯಿಲ್ಲದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಆತನು ದಂಡಿತನಾಗತಕ್ಕದ್ದು.

**23. 13ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ವಿವರ ಪಟ್ಟಿಯನ್ನು ಸಲ್ಲಿಸಲು ತಪ್ಪಿದ್ದಕ್ಕಾಗಿ ದಂಡನೆ.–** 13ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗಿನ ವಿವರ ಪಟ್ಟಿಯನ್ನು ಸಲ್ಲಿಸಲು ಹೊಣೆಗಾರನಾಗಿರುವ ಯಾರೇ ವ್ಯಕ್ತಿಯು, ಸದರಿ ಉಪ ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ವಿವರ ಪಟ್ಟಿಕೆಯನ್ನು ಸಲ್ಲಿಸಲು ಇಚ್ಛಾಪೂರ್ವಕವಾಗಿ ತಪ್ಪಿದರೆ ಅಥವಾ ನಿರ್ಲಕ್ಷಿಸಿದರೆ ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದು.

**24. 15ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** 15ನೇ ಪ್ರಕರಣವನ್ನು ಉಲ್ಲಂಘಿಸಿ, ಯಾವುದೇ ಸಿಹಿ ಅಥವಾ ಆಹಾರ ಪದಾರ್ಥವನ್ನು ಸೇವಿಸುವ ಸಲುವಾಗಿ ಸಿದ್ಧಪಡಿಸುವ, ಬಡಿಸುವ, ವಿತರಿಸುವ ಅಥವಾ ಒದಗಿಸುವ ಅಥವಾ ಸೇವನೆಗಾಗಿ ಸಿದ್ಧಪಡಿಸುವಂತೆ, ಬಡಿಸುವಂತೆ, ವಿತರಿಸುವಂತೆ ಅಥವಾ ಒದಗಿಸುವಂತೆ ಮಾಡುವ

ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**25. 16ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** 16ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**26. ಅಪರಾಧಗಳು ಸಂಜ್ಞೇಯವಾದವುಗಳು ಮತ್ತು ಜಾಮೀನೀಯವಲ್ಲದವುಗಳು ಆಗಿರತಕ್ಕದ್ದು.–** (1) ಈ ಅಧಿನಿಯಮದ 7ನೇ, 22ನೇ ಮತ್ತು 23ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳನ್ನು ಹೊರತುಪಡಿಸಿ ದಂಡನೀಯವಾದ ಪ್ರತಿಯೊಂದು ಅಪರಾಧವು ಸಂಜ್ಞೇಯವಾದುದು ಆಗಿರತಕ್ಕದ್ದು.

(2) 20ನೇ ಪ್ರಕರಣದ ಮೇರೆಗೆ ದಂಡನೀಯವಾದ ಪ್ರತಿಯೊಂದು ಅಪರಾಧವೂ, ಜಾಮೀನೀಯವಲ್ಲದುದು ಮತ್ತು ರಾಜಿ ಮಾಡಿಕೊಳ್ಳಲಾಗದ್ದು ಆಗಿರತಕ್ಕದ್ದು.

**27. ರುಜುವಾತಿನ ಭಾರ.–** ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, 20ನೇ ಪ್ರಕರಣದ ಮೇರೆಗೆ ಒಂದು ದಂಡನೀಯವಾದ ಅಪರಾಧದ ಪ್ರಾಸಿಕ್ಯೂಷನ್‌ನಲ್ಲಿ, ತಾನು ವಧು–ವರದಕ್ಷಿಣೆಯನ್ನು ನೀಡಿಲ್ಲವೆಂದು ಅಥವಾ ತೆಗೆದುಕೊಂಡಿಲ್ಲವೆಂದು ಅಥವಾ ಕೇಳಿಲ್ಲವೆಂದು ಅಥವಾ ತಾನು ವಧು–ವರದಕ್ಷಿಣೆ ಕೊಡಲು, ತೆಗೆದುಕೊಳ್ಳಲು ಅಥವಾ ಕೇಳಲು ದುಷ್ಪ್ರೇರಿಸಿಲ್ಲವೆಂದು ರುಜುವಾತುಪಡಿಸುವ ಹೊಣೆಯು ಆಪಾದಿತನ ಮೇಲಿರತಕ್ಕದ್ದು.

## ಅಧ್ಯಾಯ– VIII
## ಸಂಕೀರ್ಣ

**28. ಈ ಅಧಿನಿಯಮದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿರುವ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯಕ್ಕೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**29. ರಿಜಿಸ್ಟ್ರಾರನು ಲೋಕ ನೌಕರನಾಗಿರುವುದು.–** ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಥವಾ ಆದೇಶಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವ ರಿಜಿಸ್ಟ್ರಾರನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದು.

**30. ನಿಯಮಗಳನ್ನು ರಚಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಅದರ ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮವು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ,–

(ಎ) ರಿಜಿಸ್ಟ್ರಾರನ ಕರ್ತವ್ಯಗಳು ಮತ್ತು ಅಧಿಕಾರ;

(ಬಿ) ಯಾವ ರೀತಿಯಲ್ಲಿ ವಿವರಣ ಪತ್ರವನ್ನು ಸಲ್ಲಿಸಬೇಕೋ ಆ ರೀತಿ;

(ಸಿ) ಈ ಅಧಿನಿಯಮದ ಮೇರೆಗೆ ಇಡಬೇಕೆಂದು ಅಗತ್ಯಪಡಿಸಿದ ರಿಜಿಸ್ಟರುಗಳು ಅಥವಾ ದಾಖಲೆಗಳು;

(ಡಿ) ಯಾರ ಅಭಿರಕ್ಷೆಯಲ್ಲಿ ರಿಜಿಸ್ಟರುಗಳನ್ನು ಇಡಬೇಕೋ ಆ ಅಭಿರಕ್ಷೆ ಮತ್ತು ದಾಖಲೆಗಳನ್ನು ಅಂಥ ದಾಖಲೆಗಳ ಸಂರಕ್ಷಣೆ;

(ಇ) ವಿವಾಹ ತೆರಿಗೆ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು;

(ಎಫ್) ವಿವಾಹ ತೆರಿಗೆಯನ್ನು ವಿಧಿಸುವ ಮತ್ತು ವಸೂಲು ಮಾಡುವ ರೀತಿ ಮತ್ತು ವಿಧಾನ;

(ಜಿ) ವಿವಾಹದ ಖರ್ಚು ವೆಚ್ಚಗಳನ್ನು ನಿರ್ಧರಿಸುವ ರೀತಿ;

(ಹೆಚ್) ಯಾವ ನಿಯಮಗಳಿಗೆ ಒಳಪಟ್ಟು 14ನೇ ಪ್ರಕರಣದ ಮೇರೆಗಿನ ಮಂಜೂರಾತಿಗಳನ್ನು ಮಾಡಬಹುದೋ ಆ ನಿಯಮಗಳು;

(ಐ) 14ನೇ ಪ್ರಕರಣದ ಮೇರೆಗೆ ಮಂಜೂರು ಮಾಡಬಹುದಾದ ಸೌಕರ್ಯಗಳು;

(ಜೆ) ಈ ಅಧಿನಿಯಮದ ಮೇರೆಗೆ ಗೊತ್ತುಪಡಿಸಲು ಅಗತ್ಯಪಡಿಸಿದಂಥ ಇತರ ವಿಷಯ;

(ಕೆ) ಈ ಅಧಿನಿಯಮದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಈ ಅಧಿನಿಯಮದಲ್ಲಿ ಯಾವುದೇ ಉಪಬಂಧ ಇರದಿರುವಾಗ ಅಥವಾ ಸಾಕಷ್ಟು ಉಪಬಂಧ ಇರದಿರುವಾಗ ಮತ್ತು ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಆ ಬಗ್ಗೆ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಭಾವಿಸುವಂಥ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನದಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದರ ನಿಕಟೋತ್ತರದ ಅಧಿವೇಶನಗಳು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಬಾರದೆಂದು ಎರಡೂ ಸದನಗಳೂ ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

**31. ಈ ಅಧಿನಿಯಮವು ಇತರ ಕಾನೂನುಗಳಿಗೆ ಅಧ್ಯಾರೋಹಿಯಾಗಿರತಕ್ಕದ್ದು.–** ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ರೂಢಿಯಲ್ಲಿ, ಆಚರಣೆಯಲ್ಲಿ, ಕರಾರಿನಲ್ಲಿ ಅಥವಾ ನ್ಯಾಯಾಲಯದ ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಅಥವಾ ಇತರ ಪ್ರಾಧಿಕಾರದ ಆದೇಶದಲ್ಲಿ ಅದಕ್ಕೆ ಅಸಂಗತವಾದುದು ಏನೇ ಒಳಗೊಂಡಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕದ್ದು.

**32. 1949ರ ಮೈಸೂರು ಅಧಿನಿಯಮ 69ರ ತಿದ್ದುಪಡಿ.–** ಬೆಂಗಳೂರು ನಗರ ಪೌರ ನಿಗಮ ಅಧಿನಿಯಮ, 1949 (1949ರ ಮೈಸೂರು ಅಧಿನಿಯಮ, 69) ರಲ್ಲಿ,–

(1) 56ನೇ ಪ್ರಕರಣದ (1)ನೇ ಉಪ–ಪ್ರಕರಣಕ್ಕೆ ಬದಲಾಗಿ ಈ ಮುಂದಿನ ಉಪ–ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

1. ಕ್ರಿಮಿನಲ್ ನ್ಯಾಯಾಲಯದಿಂದ,–

(i) ರಾಜಕೀಯ ಸ್ವರೂಪದ ಅಥವಾ ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧಗಳಲ್ಲದ ಇತರ ಯಾವುದೇ ಅಪರಾಧಕ್ಕಾಗಿ ಆಜೀವ ಕಾರಾವಾಸದಿಂದ ದಂಡಿತನಾದ ಅಥವಾ ಆರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡಿತನಾದ; ಅಥವಾ

(ii) ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976ರ 20ನೇ, 21ನೇ ಅಥವಾ 22ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಕಾರಾವಾಸದಿಂದ ದಂಡಿತನಾದ;
ಯಾರೇ ವ್ಯಕ್ತಿಯು ಅಂಥ ದಂಡನೆಯನ್ನು ವಿಪರ್ಯಯಗೊಳಿಸಿಲ್ಲದಿದ್ದರೆ ಅಥವಾ ಅಪರಾಧವನ್ನು ಕ್ಷಮಿಸಿಲ್ಲದಿದ್ದರೆ ದಂಡನೆಯನ್ನು ಅನುಭವಿಸುತ್ತಿರುವಾಗ ಮತ್ತು ದಂಡನೆಯ ಅವಧಿಯ ಮುಕ್ತಾಯದ

ದಿನಾಂಕದಿಂದ ಐದು ವರ್ಷಗಳ ಅವಧಿಗೆ ಕೌನ್ಸಿಲರ್ ಆಗಿ ಚುನಾಯಿತನಾಗಲು ಅಥವಾ ನೇಮಕಗೊಳ್ಳಲು ಅನರ್ಹನಾಗತಕ್ಕದ್ದು.

2. 69–ಎಕ್ಸ್ ಪ್ರಕರಣದ (1)ನೇ ಉಪಪ್ರಕರಣದಲ್ಲಿ, (ಬಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಸಿ). ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976ರ 20ನೇ, 21ನೇ ಅಥವಾ 22ನೇ ಪ್ರಕರಣದ ಮೇರೆಗೆ ದಂಡನೀಯ ಅಪರಾಧ".

**33. 1959ರ ಕರ್ನಾಟಕ ಅಧಿನಿಯಮ 10ರ ತಿದ್ದುಪಡಿ.**–ಕರ್ನಾಟಕ ಗ್ರಾಮ ಪಂಚಾಯತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ, 1959ರಲ್ಲಿ,–

(1) 11ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ (ಸಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಸಿ). ಆತನು ಕ್ರಿಮಿನಲ್ ನ್ಯಾಯಾಲಯದಿಂದ,–

(i) ನೈತಿಕ ಅಧ:ಪತನವನ್ನೊಳಗೊಳ್ಳುವ ಮತ್ತು ಆರು ತಿಂಗಳ ಅವಧಿಗೆ ಮೀರಿದ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ; ಅಥವಾ

(ii) ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976ರ 20ನೇ, 21ನೇ ಅಥವಾ 22ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದಂಡಿತನಾಗಿದ್ದರೆ;

ಮತ್ತು ಅಂಥ ದಂಡನೆಯನ್ನು ತರುವಾಯ ವಿಪರ್ಯಯಗೊಳಿಸಿರದಿದ್ದರೆ ಅಥವಾ ಮಾಫಿ ಮಾಡಿರದಿದ್ದರೆ".

(2) 103ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ, (ಎ) ಖಂಡಕ್ಕೆ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

" (ಎ). ಆತನು ಕ್ರಿಮಿನಲ್ ನ್ಯಾಯಾಲಯದಿಂದ;

(i) ನೈತಿಕ ಅಧಃಪತನವನ್ನೊಳಗೊಂಡ ಮತ್ತು ಆರು ತಿಂಗಳ ಅವಧಿಗೆ ಮೀರಿದ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ; ಅಥವಾ

(ii) ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976ರ 20ನೇ, 21ನೇ ಅಥವಾ 22ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದಂಡಿತನಾಗಿದ್ದರೆ;

ಮತ್ತು ಅಂಥ ದಂಡನೆಯನ್ನು ತರುವಾಯ ವಿಪರ್ಯಯಗೊಳಿಸಿರದಿದ್ದರೆ ಅಥವಾ ಮಾಫಿ ಮಾಡಿರದಿದ್ದರೆ, ಅಥವಾ"

**34. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.**– ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ 16ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

(ಎ) ಆತನು ಕ್ರಿಮಿನಲ್ ನ್ಯಾಯಾಲಯದಿಂದ,–

(i) ನೈತಿಕ ಅಧಃಪತನವನ್ನೊಳಗೊಂಡ ಮತ್ತು ಆರು ತಿಂಗಳ ಅವಧಿಗೆ ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ; ಅಥವಾ

(ii) ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976ರ 20ನೇ, 21ನೇ ಅಥವಾ 22ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ

– ಕಾರವಾಸದ ದಂಡನೆಯಿಂದ ದಂಡಿತನಾಗಿದ್ದರೆ ಅಂಥ ದಂಡನೆಯನ್ನು ತರುವಾಯ ವಿಪರ್ಯಾಯಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿರದಿದ್ದರೆ ಅಥವಾ ಕ್ಷಮಿಸಿರದಿದ್ದರೆ ಅಥವಾ."

**35. 1966ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ.–** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ, 1966ರಲ್ಲಿ 16ನೇ ಪ್ರಕರಣದ (2)ನೇ ಉಪ–ಪ್ರಕರಣದ (ಬಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

(ಬಿ) ಆತನು ಕ್ರಿಮಿನಲ್ ನ್ಯಾಯಾಲಯದಿಂದ,–

(i) ನೈತಿಕ ಅಧಃಪತನವನ್ನೊಳಗೊಂಡ ಮತ್ತು ಆರು ತಿಂಗಳು ಅವಧಿಗೆ ಮೀರಿದ ಕಾರಾವಾಸದಿಂದ ದಂಡನೀಯ ಅಪರಾಧಕ್ಕಾಗಿ; ಅಥವಾ

(ii) ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976ರ 20ನೇ, 21ನೇ ಅಥವಾ 22ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದಂಡಿತನಾಗಿದ್ದರೆ,

ಮತ್ತು ಅಂಥ ದಂಡನೆಯನ್ನು ತರುವಾಯ ವಿಪರ್ಯಯಗೊಳಿಸಿರದಿದ್ದರೆ ಅಥವಾ ಮಾಫಿ ಮಾಡಿರದಿದ್ದರೆ; ಅಥವಾ

**36. ನಿರಸನ ಮತ್ತು ಉಳಿಸುವಿಕೆಗಳು.–** ಬೆಳಗಾಂ ಪ್ರದೇಶದಲ್ಲಿ ಜಾರಿಯಲ್ಲಿರುವ ಮುಂಬಯಿ ವಿವಾಹ ನೋಂದಣಿ ಅಧಿನಿಯಮ, 1953 (1954ರ ಮುಂಬಯಿ ಅಧಿನಿಯಮ 5) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ 3) 6ನೇ ಪ್ರಕರಣದ ಉಪಬಂಧಗಳು ಅಂಥ ನಿರಸನಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಸದರಿ ಅಧಿನಿಯಮಿತಿಯನ್ನು ನಿರಸನಗೊಳಿಸಿದ್ದಿದ್ದರೆ ಮತ್ತು ಈ ಅಧಿನಿಯಮದ ಮೂಲಕ ಪನರ್ ಅಧಿನಿಯಮಿತಿಗೊಳಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ಅನುಸೂಚಿ–ಎ**
**(5ನೇ ಪ್ರಕರಣವನ್ನು ನೋಡಿ)**
**ವಿವಾಹದ ವಿವರಣ ಪತ್ರ**

| | | | |
|---|---|---|---|
| 1. | ವಿವಾಹದ ದಿನಾಂಕ | | |
| 2. | ವಿವಾಹದ ಸ್ಥಳ (ಸ್ಥಳವನ್ನು ಗುರುತಿಸಲು ಸಾಕಷ್ಟು ವಿವರಗಳೊಂದಿಗೆ) | | |
| 3. | (ಎ) ವರನ ಹೆಸರು | | |
| | (ಬಿ) ಆತನ ವಯಸ್ಸು | | |
| | (ಸಿ) ವಾಸಸ್ಥಳದ ವಿಳಾಸ | | |
| | (ಡಿ) ವಿವಾಹದ ಸಮಯದಲ್ಲಿ ವರನ ವೈವಾಹಿಕ ಸ್ಥಾನಮಾನ ಅವಿವಾಹಿತನೇ/ವಿಧುರನೇ/ವಿವಾಹ ವಿಚ್ಛೇದಿತನೇ | | |
| | (ಇ) ವರನ ಸಹಿ, ದಿನಾಂಕದೊಂದಿಗೆ | | |
| 4. | (ಎ) ವಧುವಿನ ಹೆಸರು | | |
| | (ಬಿ) ಆಕೆಯ ವಯಸ್ಸು | | |
| | (ಸಿ) ವಾಸಸ್ಥಳದ ವಿಳಾಸ | | |
| | (ಡಿ) ವಿವಾಹದ ಸಮಯದಲ್ಲಿ ವಧುವಿನ ವೈವಾಹಿಕ ಸ್ಥಾನಮಾನ ಅವಿವಾಹಿತಳೇ/ವಿಧವೆಯೇ/ವಿವಾಹ ವಿಚ್ಛೇದಿತಳೇ | | |
| | (ಇ) ವಧುವಿನ ಸಹಿ, ದಿನಾಂಕದೊಂದಿಗೆ. | | |
| 5. | (ಎ) ವರನ ತಂದೆ ಅಥವಾ ಪೋಷಕರ ಪೂರ್ಣ ಹೆಸರು | | |
| | (ಬಿ) ಅವರ ವಯಸ್ಸು | | |
| | (ಸಿ) ವಾಸಸ್ಥಳದ ವಿಳಾಸ | | |
| | (ಡಿ) ವರನ ತಂದೆ ಅಥವಾ ಪೋಷಕರು, ಅವರು ಸಮ್ಮತಿಸುವ ಪಕ್ಷಕಾರರಾಗಿದ್ದರೆ ಅವರ ಸಹಿ ಮತ್ತು ದಿನಾಂಕ. | | |
| 6. | (ಎ) ವಧುವಿನ ತಂದೆ ಅಥವಾ ಪೋಷಕರ ಪೂರ್ಣ ಹೆಸರು | | |
| | (ಬಿ) ಅವರ ವಯಸ್ಸು | | |
| | (ಸಿ) ವಾಸಸ್ಥಳದ ವಿಳಾಸ | | |
| | (ಡಿ) ವಧುವಿನ ತಂದೆ ಅಥವಾ ಪೋಷಕರು, ಅವರು ಸಮ್ಮತಿಸುವ ಪಕ್ಷಕಾರರಾಗಿದ್ದರೆ ಅವರ ಸಹಿ ಮತ್ತು ದಿನಾಂಕ | | |
| 7. | (ಎ) ಸಾಕ್ಷಿದಾರರ ಹೆಸರುಗಳು | (1) | (2) |
| | (ಬಿ) ತಂದೆಯ ಹೆಸರಿನೊಂದಿಗೆ ಸಾಕ್ಷಿದಾರರ ವಿಳಾಸಗಳು | (1) | (2) |
| | (ಸಿ) ಸಾಕ್ಷಿದಾರರ ಸಹಿ ಮತ್ತು ದಿನಾಂಕ | (1) | (2) |

**ದೃಢೀಕರಿಸಲಾಗಿದೆ**
**(ಗೊತ್ತುಪಡಿಸಲಾದ ವ್ಯಕ್ತಿ)**

ದಿನಾಂಕ: ಸಹಿ
ಸ್ಥಳ: ಹೆಸರು
ಹುದ್ದೆ
ವಿಳಾಸ

ಅಂಚೆ ಮೂಲಕ/ ಖುದ್ದಾಗಿ
ಸ್ವೀಕರಿಸಲಾಗಿದೆ.

ದಿನಾಂಕ: ಮೊಹರು ರಿಜಿಸ್ಟ್ರಾರ್
ಸ್ಥಳ:

**ಅನುಸೂಚಿ**
**(12ನೇ ಪ್ರಕರಣವನ್ನು ನೋಡಿ)**

| | | |
|---|---|---|
| 1. | ವಿವಾಹದ ವೆಚ್ಚವು 5,000.00 ರೂಪಾಯಿಗಳನ್ನು ಮೀರಿದ್ದಲ್ಲಿ ಆದರೆ 10,000.00 ಗಳನ್ನು ಮೀರದಿದ್ದಲ್ಲಿ | 5,000 ರೂಪಾಯಿಗಳನ್ನು ಮೀರಿದ ವೆಚ್ಚದ ಮೊಬಲಗಿನ ಶೇ 10ರಷ್ಟು |
| 2. | ವಿವಾಹದ ವೆಚ್ಚವು 10,000.00 ರೂಪಾಯಿಗಳನ್ನು ಮೀರಿದ್ದಲ್ಲಿ ಆದರೆ 20,000.00 ಗಳನ್ನು ಮೀರದಿದ್ದಲ್ಲಿ | 10,000.00 ರೂ.ಗಳನ್ನು ಮೀರಿದ ವೆಚ್ಚದ ಮೊಬಲಗಿನ ಶೇ 25 ರಷ್ಟು |
| 3. | ವಿವಾಹದ ವೆಚ್ಚವು 20,000.00 ರೂಪಾಯಿಗಳನ್ನು ಮೀರಿದ್ದಲ್ಲಿ ಆದರೆ 50,000.00 ಗಳನ್ನು ಮೀರದಿದ್ದಲ್ಲಿ | 20,000.00 ರೂ.ಗಳನ್ನು ಮೀರಿದ ವೆಚ್ಚದ ಮೊಬಲಗಿನ ಶೇ 40 ರಷ್ಟು |
| 4. | ವಿವಾಹದ ವೆಚ್ಚವು 50,000.00 ರೂಪಾಯಿಗಳನ್ನು ಮೀರಿದ್ದಲ್ಲಿ | ರೂ 5000 + 50,000.00 ರೂ ಗಳನ್ನು ಮೀರಿದ ವೆಚ್ಚದ ಮೊಬಲಗಿನ ಶೇ 60 ರಷ್ಟು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಕೆ. ಆರ್. ಚಾಮಯ್ಯ**
ಸರ್ಕಾರದ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

**ಅಧಿಸೂಚನೆ**
**ಡಬ್ಲ್ಯೂಸಿಡಿ 278, ಎಸ್ ಡಬ್ಲ್ಯೂಡಬ್ಲ್ಯೂ 2001, ದಿನಾಂಕ:17ನೇ ಡಿಸೆಂಬರ್, 2003**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕರ್ನಾಟಕ ವಿವಾಹ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976 ರ IIನೇ ಅಧ್ಯಾಯದ 3ನೇ, 4ನೇ, 5ನೇ, 6ನೇ, 7ನೇ, 8ನೇ ಪ್ರಕರಣವು, VIIIನೇ ಅಧ್ಯಾಯದ 29ನೇ 30ನೇ ಮತ್ತು 31ನೇ ಪ್ರಕರಣವು 1.1.2004 ರಿಂದ ಜಾರಿಗೆ ಬರುತ್ತದೆಂದು ಈ ಮೂಲಕ ಅಧಿಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಪಿ.ಡಿ. ಸಿದ್ಧಾಂತಿ**
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

The above translation of the Karnataka Marriages (Registration and Miscellaneous Provisions) Act 1976 (Karnataka Act 2 of 1984) shall be authoritative text in the Kannada Language under section 5A of the Karnataka Official Language Act, 1963.

Governor of Karnataka

ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು
ಪಿ.ಆರ್. 62 ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.